# ಇಂಡಿಯಾ ಫೌಂಡೇಶನ್ ಫಾರ್ ದ ಆರ್ಟ್ಸ್ (ಐಎಫ್ಎ)

## ಕಲಾ ಸಂಶೋಧನಾ ಕಾರ್ಯಕ್ರಮಕ್ಕಾಗಿ ಪ್ರಸ್ತಾವನೆಗಳನ್ನು ಆಹ್ವಾನಿಸುತ್ತದೆ

**ಪ್ರಸ್ತಾವನೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ: ಆಗಸ್ಟ್ 10, 2026**

**ಇತರ ಭಾರತೀಯ ಭಾಷೆಗಳಲ್ಲಿಯೂ ಈ ಪ್ರಕಟಣೆಯನ್ನು ಓದಲು ಇಲ್ಲಿ ಕ್ಲಿಕ್ ಮಾಡಿ.**

2025ರಲ್ಲಿ ಪುನರಾರಂಭಿಸಿರುವ ಐಎಫ್ಎಯ ಕಲಾ ಸಂಶೋಧನಾ ಕಾರ್ಯಕ್ರಮವು, ಕಲಾ ಸಂಶೋಧನೆಯಲ್ಲಿ ವಿಭಿನ್ನ ಮತ್ತು ಹೊಸರೀತಿಯ, ಮಾರ್ಪಡಿಸಬಲ್ಲ (ಫ್ಲೆಕ್ಸಿಬಲ್) ವಿಧಾನಗಳ ಪ್ರಾಮುಖ್ಯತೆಯನ್ನು ಗುರುತಿಸುತ್ತದೆ. ಈ ಕಾರ್ಯಕ್ರಮದ ಅಡಿಯಲ್ಲಿ, ಸೃಜನಶೀಲ, ವಿದ್ವತ್ಪೂರ್ಣ ಹಾಗೂ/ ಅಥವಾ ಸಾಂಸ್ಕೃತಿಕ ಅಭ್ಯಾಸದಲ್ಲಿ ನೆಲೆಗೊಂಡ ತಿಳಿವಿನ/ಜ್ಞಾನದ ಹಾಗೂ ಚಿಂತನೆಯ ಬಗೆಗಳನ್ನು ಅನ್ವೇಷಿಸುವ, ಹಾಗೂ ಪರಿಶೀಲನೆ, ಸಂವಾದ, ಪರೀಕ್ಷಣೆ ಮತ್ತು ಪ್ರಯೋಗಗಳ ಮೂಲಕ ಕಲೆಯ ಆಳವಾದ ಅರಿವು ಉಂಟುಮಾಡಲು ಪ್ರೋತ್ಸಾಹ ನೀಡಲು, ಭಾರತೀಯ ಕಲಾ ಇತಿಹಾಸ ಮತ್ತು ಕಲಾ ಅಭಿವ್ಯಕ್ತಿಗಳ ಕುರಿತು ವೈವಿಧ್ಯಮಯ ದೃಷ್ಟಿಕೋನಗಳನ್ನು ಹೊಮ್ಮಿಸುವ ಯೋಜನೆಗಳನ್ನು ನಾವು ಅನುಷ್ಠಾನಗೊಳಿಸಬಯಸುತ್ತೇವೆ.

ಈ ಯೋಜನೆಗಳಲ್ಲಿ, ಕಲಾ ಸಂಶೋಧನೆಯನ್ನು ಕೆಳಗಿನಂತೆಯಾಗಿ ಅರ್ಥೈಸಬಹುದು:

- ಕಲೆಯಲ್ಲಿ ಸಂಶೋಧನೆಯ ಹೊಸ ವಿಧಾನ, ಹೊಸ ವ್ಯಾಖ್ಯಾನ ಹಾಗೂ ಹೊಸ ರೀತಿಯ ಹಂಚುವಿಕೆ (dissemination)ಗಳನ್ನು ರೂಪಿಸುವ **ಅಭ್ಯಾಸ**ದ ರೂಪವಾಗಿ. ಪ್ರಯೋಗಾತ್ಮಕತೆಯನ್ನು ಪೋಷಿಸುವ, ಸಂಶೋಧನೆಯನ್ನು ದಾಖಲೀಕರಣದಿಂದ ಆಚೆ ಕೊಂಡೊಯ್ಯುವ, ಹಾಗೆಯೇ, ಕಲೆಯಲ್ಲಿ ಯಾರು ಸಂಶೋಧನೆ ಕೈಗೊಳ್ಳಬಹುದು ಎನ್ನುವುದನ್ನು, ಯಾವುದು ಸಂಶೋಧನಾ ಯೋಗ್ಯ ಮತ್ತು ಹೇಗೆ ಎನ್ನುವುದನ್ನು ಪ್ರಶ್ನಿಸುವ ಅಧ್ಯಯನಗಳಿಗೆ ಪ್ರೋತ್ಸಾಹ ನೀಡುತ್ತೇವೆ.

- ದೇಹ, ತಂತ್ರಜ್ಞಾನ, ವೈಯಕ್ತಿಕ ಕಥನಗಳು, ನೆನಪುಗಳು, ಅನುಭವಗಳು, ಸಂಬಂಧಗಳು ಮತ್ತು ಕಲ್ಪನೆಗಳ ಮೂಲಕ ತಿಳಿಯುವ ಹಾಗೂ ಯೋಚಿಸುವ ವಿಶಿಷ್ಟ ರೀತಿಗಳ ಮೂಲಕ ಸಂಶೋಧನಾ **ವಿಧಾನ**ಗಳ ಪುನರ್ ಪರಿಕಲ್ಪನೆ

- ಸ್ವಂತದ ಸೃಜನಶೀಲ/ಕಲಾತ್ಮಕ/ಸಾಂಸ್ಕೃತಿಕ ಅಭ್ಯಾಸಗಳ ನೇರ **ಪರಿಶೀಲನೆ**. ಸ್ವಪರೀಕ್ಷಣೆಯ ಅಂಶವನ್ನೊಳಗೊಂಡ ಸಂಶೋಧನಾ ಪ್ರಕ್ರಿಯೆಗಳನ್ನು, ಹಾಗೂ ತಮ್ಮ ಅಥವಾ ಇತರರ ಅಭ್ಯಾಸವನ್ನು ಗಂಭೀರವಾಗಿ, ಕುತೂಹಲದಿಂದ ಹಾಗೂ ಅಭ್ಯಾಸದ ಪರಿಧಿಯನ್ನು ವಿಸ್ತರಿಸುವ ದೃಷ್ಟಿಕೋನದಿಂದ ಪರಿಶೀಲಿಸುವ ಸಂಶೋಧನಾ ಪ್ರಕ್ರಿಯೆಗಳನ್ನು ಅನ್ವೇಷಿಸಲು ಬಯಸುತ್ತೇವೆ.

- ಪ್ರಚಲಿತ ಸಂಕಥನಗಳನ್ನು ಹಾಗೂ ಅಭಿವ್ಯಕ್ತಿಯ ರೂಪಗಳನ್ನು **ಪ್ರಶ್ನಿಸುವ**, ಹಾಗೂ ಭಾರತದಲ್ಲಿ ಇತಿಹಾಸಗಳು, ಸಾಂಸ್ಕೃತಿಕ ಪರಂಪರೆ, ಹಾಗೂ ಕಲಾ ಅಭ್ಯಾಸದ ಅಭಿವ್ಯಕ್ತಿಗಳನ್ನು ಮರುಪರಿಶೀಲಿಸುವ ವಿಭಿನ್ನ ದೃಷ್ಟಿಕೋನಗಳನ್ನು ಒದಗಿಸುವ ಪ್ರಯತ್ನ. ಸಮುದಾಯದೊಂದಿಗೆ ತೊಡಗಿಸುಕೊಳ್ಳುವಿಕೆ, ಕಲೆಯ ಇತಿಹಾಸ ಹಾಗೂ ಸಂಬಂಧಿತ ಕ್ಷೇತ್ರಗಳ ಪುನರ್ವೀಕ್ಷಣೆ, ಹಾಗೂ ಭವಿಷ್ಯದ ಕಲಾ ಪ್ರಕ್ರಿಯೆಗಳು ಹೇಗಿರಬಹುದೆಂಬ ಅನ್ವೇಷಣೆಯಾಗಿ ಸಂಶೋಧನೆಯನ್ನು ನೋಡಬಹುದು.

- **ಅಲಕ್ಷಿತ ಧ್ವನಿಗಳಿಗೆ ದನಿಯಾಗಿ** - ಹೊಸ ಭಾಷೆಗಳು, ಪದಬಳಕೆ ಮತ್ತು ಸ್ಥಳೀಯ ಸಂಪನ್ಮೂಲಗಳನ್ನು ನಿರ್ಮಿಸುವ ಪ್ರಯತ್ನವಾಗಿರಬಹುದು.ಯಾವುದು 'ಅಲಕ್ಷಿತ' ಹಾಗೂ ಯಾವುದು 'ಪ್ರಬಲ'ಎನ್ನುವುದರ ಪುನರ್ ಮೌಲ್ಯಮಾಪನವನ್ನೂ ಒಳಗೊಂಡಿರಬಹುದು.

- **ಸಂವಾದ**ದ ಕ್ರಿಯೆ - ವಿಭಿನ್ನ ಕಲಾ ಪ್ರಕಾರಗಳು ಮತ್ತು ಅರಿವಿನ ಶಾಖೆಗಳ ನಡುವೆ ಅರ್ಥಪೂರ್ಣ ವಿನಿಮಯಕ್ಕೆ ಉತ್ತೇಜನ ನೀಡುವ ಯೋಜನೆಗಳನ್ನು ಅನುಷ್ಠಾನಗೊಳಿಸಲು ಬಯಸುತ್ತೇವೆ. (ಉದಾಹರಣೆಗೆ ಕಲೆ ಹಾಗೂ ವಿಜ್ಞಾನ,

ಕಲೆ ಹಾಗೂ ತತ್ವಶಾಸ್ತ್ರ, ಕಲೆ ಹಾಗೂ ಡಿಜಿಟಲ್ ಮಾಧ್ಯಮ, ಶಾಸ್ತ್ರ ಹಾಗೂ ಪ್ರಯೋಗ). ಕಲಾ ಪ್ರಕ್ರಿಯೆ ಹಾಗೂ ಸಂಶೋಧನಾ ಪ್ರಕ್ರಿಯೆಗಳು, ಶಾಸ್ತ್ರ, ಸಂಸ್ಕೃತಿ, ಶರೀರ ಹಾಗೂ ತಂತ್ರಜ್ಞಾನದ ನಡುವೆ ಹೊಸ ರೂಪದ ಸಹಯೋಗ, ಸಹಕಾರಗಳನ್ನು ಹುಡುಕುತ್ತಿರುವವರೊಂದಿಗೆ ತೊಡಗಿಸಿಕೊಳ್ಳಲು ನಾವು ಉತ್ಸುಕರಾಗಿದ್ದೇವೆ.

- ಸಂಶೋಧನೆಗೆ ಎಡೆ ಮಾಡಿಕೊಡುವ **ಭಾಷಾಂತರ**ದ ಕ್ರಿಯೆ - ಭಾಷಾಂತರದ ಪ್ರಕ್ರಿಯೆಯ ಸಂದರ್ಭವನ್ನು ಅನ್ವೇಷಿಸಲು, ಬಹುಭಾಷೀಯ ವಿಧಾನಗಳೊಂದಿಗೆ ಪ್ರಯೋಗ ಮಾಡಲು, ಹಾಗೂ/ ಅಥವಾ ಭಾಷಾಂತರದ ಸಾಂಸ್ಕೃತಿಕ ಮೌಲ್ಯವನ್ನು ಅಧ್ಯಯನ ಮಾಡಲು ಬಯಸುವ ವ್ಯಕ್ತಿಗಳ ಪ್ರಸ್ತಾವನೆಗಳನ್ನು ಪ್ರೋತ್ಸಾಹಿಸುತ್ತೇವೆ.

**ಈ ನಿಖರ ಉದ್ದೇಶಗಳ ಹೊರಗಿನ, ಆದರೆ ಕಲಾ ಸಂಶೋಧನೆಯ ಪರಿಕಲ್ಪನೆಯನ್ನು ವಿಸ್ತರಿಸುವ ಪ್ರಸ್ತಾಪಗಳಿಗೂ ಸ್ವಾಗತವಿದೆ.**

**ಯೋಜನೆಯ ಅವಧಿ:**

ಕನಿಷ್ಠ **ಒಂದು ವರ್ಷ** ಮತ್ತು ಗರಿಷ್ಠ **18 ತಿಂಗಳು.**

**ಹಣಕಾಸು ಯೋಜನೆ (ಬಜೆಟ್):**

ನೀವು ರೂ. **5,00,000/-** ವರೆಗೆ ಬೇಡಿಕೆ ಸಲ್ಲಿಸಬಹುದು. ಈ ಮೊತ್ತದ ಗರಿಷ್ಠ 35% ವರೆಗೆ ಗೌರವಧನವನ್ನು ಕೇಳಬಹುದು. (ಸಂಸ್ಥಾತ್ಮಕ ವೆಚ್ಚಗಳು, ಕಟ್ಟಡ ವೆಚ್ಚಗಳು ಅಥವಾ ಮೂಲಸೌಕರ್ಯ ಅಭಿವೃದ್ಧಿಗೆ ಬಜೆಟ್ ಹಾಕಬೇಡಿ. ಉಪಕರಣದ ಖರೀದಿ ಈ ಹಣಕಾಸು ಯೋಜನೆಯ ಭಾಗವಲ್ಲ. ಆದರೆ ಖರೀದಿಸಲೇಬೇಕಾದ ಅವಶ್ಯಕತೆ ಇದ್ದರೆ, ಯೋಜನೆಯ ನಂತರ ಉಪಕರಣವನ್ನು ಐಎಫ್ಎಗೆ ಹಿಂತಿರುಗಿಸಬೇಕು.)

**ಯಾರು ಅರ್ಜಿ ಸಲ್ಲಿಸಬಹುದು?**

ಶಾಸ್ತ್ರಜ್ಞರು, ಅಭ್ಯಾಸಾಧಾರಿತ ಸಂಶೋಧಕರು, ಕಲಾವಿದ-ಹೋರಾಟಗಾರರು, ಕ್ಯೂರೇಟರ್‌ಗಳು, ಭಾಷಾಂತರಕಾರರು, ಕಲಾವಿದ-ಶಿಕ್ಷಕರು, ಲೇಖಕರು, ತತ್ವಜ್ಞಾನಿಗಳು, ಆಟಗಳ ವಿನ್ಯಾಸಕರು(gamers), ಅಥವಾ ಸಂಶೋಧನೆ-ಅಭ್ಯಾಸಗಳ ಮಧ್ಯೆ ತಮ್ಮನ್ನು ಗುರುತಿಸಿಕೊಳ್ಳಲು ಇಚ್ಛಿಸುವ **ಯಾರಾದರೂ.**

**ಪ್ರಸ್ತಾವನೆ ಸಲ್ಲಿಸಲು ಮಾರ್ಗಸೂಚಿಗಳು:**

- ನೀವು ಪ್ರಸ್ತಾವನೆ ಆಹ್ವಾನದ (Request for Proposals) ಕುರಿತು ಇರುವ ಯಾವುದೇ ಪ್ರಶ್ನೆಗಳನ್ನು ನಮಗೆ ಕಳುಹಿಸಲು ಮತ್ತು ನಿಮ್ಮ ಅಂತಿಮ ಪ್ರಸ್ತಾವನೆಯನ್ನು ಕಳುಹಿಸುವ ಮೊದಲು ಯೋಜನಾ ಆಲೋಚನೆಗಳನ್ನು ನಮ್ಮೊಂದಿಗೆ ಚರ್ಚಿಸಲು ಉತ್ತೇಜಿಸುತ್ತೇವೆ. ಈ ಬಗ್ಗೆ ಕಲಾ ಸಂಶೋಧನೆ ವಿಭಾಗದ ಕಾರ್ಯಕ್ರಮ ಅಧಿಕಾರಿ ಹರ್ಷಿತಾ ಬತ್ವಾಲ್ ಅವರನ್ನು ಮಿಂಚಂಚೆಯ (ಇಮೇಲ್) ಮೂಲಕ harshita@indiaifa.org ಗೆ **ಸೋಮವಾರ, ಜುಲೈ 11, 2026ರ ಮೊದಲು** **Project Proposal for Arts Research** ಎನ್ನುವ ವಿಷಯದೊಂದಿಗೆ(ಸಬ್ಜೆಕ್ಟ್) ಸಂಪರ್ಕಿಸಬಹುದು.

- ನೀವು ನಿಮ್ಮ ಪ್ರಸ್ತಾವನೆಯನ್ನು ಇಂಗ್ಲಿಷ್ ಸಹಿತ ಯಾವುದೇ ಭಾರತೀಯ ಭಾಷೆಯಲ್ಲಿ ಬರೆಯಬಹುದು.

- ಪೂರೈಸಲಾದ ಯೋಜನೆಯಲ್ಲಿ ಸಂಶೋಧನಾ ಪ್ರಶ್ನೆಗಳು, ಉದ್ದೇಶಿತ ಗುರಿಗಳು, ವೈಯಕ್ತಿಕ ಪ್ರೇರಣೆ ಮತ್ತು ಇದರಲ್ಲಿ ಒಳಗೊಂಡಿರುವ ಪಾಲುದಾರರ (ಸ್ಟೇಕ್ ಹೋಲ್ಡರ್ಸ್ ) ಬಗ್ಗೆ ಸ್ಪಷ್ಟತೆ ಇರಬೇಕು.

- ಸಾರ್ವಜನಿಕ ವಲಯದಲ್ಲಿ ಹಂಚಿಕೊಳ್ಳಬಹುದಾದ ಫಲಿತಾಂಶಗಳು ಅಥವಾ ಪ್ರಕ್ರಿಯೆಗಳೊಂದಿಗೆ ಯೋಜನಾ ಆಲೋಚನೆಗಳನ್ನು ಅಭಿವೃದ್ಧಿಪಡಿಸಲು ನಾವು ಅರ್ಜಿದಾರರನ್ನು ಉತ್ತೇಜಿಸುತ್ತೇವೆ. ಇವು ಪಠ್ಯರೂಪ, ದೃಶ್ಯರೂಪ, ಪ್ರದರ್ಶನಾತ್ಮಕ, ಕ್ಯುರೇಟೋರಿಯಲ್ (curatorial), ಬೋಧನಾತ್ಮಕ, ಸ್ಥಳಾತ್ಮಕ (spatial ), ವಸ್ತು (material) , ಸಾಕ್ಷ್ಯಚಿತ್ರ, ಧ್ವನಿಸಂಬಂಧಿತ, ಡಿಜಿಟಲ್ ಅಥವಾ ಇತರೆ ಯಾವುದೇ ಸಾಂಸ್ಕೃತಿಕ ಪಾಲ್ಗೊಳ್ಳುವಿಕೆಯ (intervention)

ರೂಪಗಳಲ್ಲಿ ಇರಬಹುದಾಗಿದೆ. ಯೋಜನೆಗಳು ವಿವಿಧ ರೀತಿಯ/ ಹಿನ್ನೆಲೆಗಳ ಪ್ರೇಕ್ಷಕರಿಗೆ ಲಭ್ಯವಿರುವಂತೆ ಮತ್ತು ಅರ್ಥಪೂರ್ಣವಾಗಿರುವಂತೆ ಉದ್ದೇಶಿತವಾದ್ದು, ಒಂದಕ್ಕಿಂತ ಹೆಚ್ಚಿನ ರೀತಿಯ ಸಮುದಾಯಗಳ ಜೊತೆ ಸಂವಹಿಸಬೇಕು.

- ನಿಮ್ಮ ಅಂತಿಮ ಪ್ರಸ್ತಾವನೆಯನ್ನು, ನಿಮ್ಮ ಸ್ವವಿವರ (CV) ಮತ್ತು ಹಣಕಾಸು ಬಳಸುವ ವಿಧಾನವನ್ನು ವಿವರಿಸುವ ವಿವರವಾದ ಬಜೆಟ್-ನೊಂದಿಗೆ , **ಆಗಸ್ಟ್ 10, 2026, ರಾತ್ರಿ 11:59 (IST)**ಘಂಟೆಯ ಒಳಗಾಗಿ, ಗರಿಷ್ಠ 25 MB ಮೀರದ ಒಂದೇ ಮಿಂಚಂಚೆಯ ಮೂಲಕ harshita@indiaifa.org ಗೆ ಆನ್‌ಲೈನ್‌ನಲ್ಲಿ ಸಲ್ಲಿಸಬೇಕು.

**ಅರ್ಹತೆ**

● ಭಾರತೀಯ ನಾಗರಿಕರು ಮಾತ್ರ ಅರ್ಜಿ ಸಲ್ಲಿಸಬಹುದು. ಇದಕ್ಕೆ PIO(ಭಾರತೀಯ ಮೂಲದ ವ್ಯಕ್ತಿಗಳು) ಹಾಗೂ OCI

(ಅನಿವಾಸಿ ಭಾರತೀಯ ಪ್ರಜೆಗಳು) ಕಾರ್ಡುದಾರರು ಅರ್ಹರಲ್ಲ.

● PAN ಕಾರ್ಡ್ ಮತ್ತು ಗುರುತು ಹಾಗೂ ನಾಗರಿಕತೆ ದೃಢೀಕರಣ (ಪಾಸ್ಪೋರ್ಟ್/ಆಧಾರ್/ಮತದಾರರ ಗುರುತಿನ ಚೀಟಿ)

ಅಗತ್ಯ

● ವ್ಯಕ್ತಿಗಳು ಮಾತ್ರ ಅರ್ಜಿ ಹಾಕಬಹುದು (ಸಂಸ್ಥೆಗಳು ಅರ್ಹವಲ್ಲ)

● ನಿಮ್ಮ ಜೊತೆ ಸಹಯೋಗಿ ಕಲಾವಿದರಿದ್ದಲ್ಲಿ ಅವರು ಕೂಡ ಭಾರತೀಯ ನಾಗರಿಕರಾಗಿರುವುದು ಅವಶ್ಯಕ.

● ಐಎಫ್ಎ ಜೊತೆ ಹಣಕಾಸು ಸಂಬಂಧಿತ ಸಮಸ್ಯೆಗಳಿರುವವರು ಅರ್ಹರಲ್ಲ

● ಹಿಂದಿನ ಐಎಫ್ಎ ಅನುದಾನದಲ್ಲಿ ಒಪ್ಪಂದವಾಗಿದ್ದ ಕೆಲಸ ಸಲ್ಲಿಸದವರು ಅರ್ಹರಲ್ಲ

● ಈ ಹಿಂದೆ ಐಎಫ್ಎ ಇಂದ ಅರ್ಜಿ ಹಾಕಲು ನಿರ್ಬಂಧಿಸಿದ ಪತ್ರ ಪಡೆದವರು ಅರ್ಹರಲ್ಲ

● ಈಗಾಗಲೇ ಐಎಫ್ಎ ಯೋಜನೆಯಲ್ಲಿ ತೊಡಗಿರುವವರು ಅರ್ಜಿ ಹಾಕಲು ಅರ್ಹರಲ್ಲ

● ಜಂಟಿ ಖಾತೆಯಿದ್ದರೆ ಒಂದಕ್ಕಿಂತ ಹೆಚ್ಚು ಜನ ಅರ್ಜಿ ಹಾಕಬಹುದು; ಇಲ್ಲದಿದ್ದರೆ ಒಬ್ಬರು ಅರ್ಜಿ ಹಾಕಿ ಇತರರನ್ನು

ಸಹಯೋಗಿಗಳಾಗಿ ಸೇರಿಸಬಹುದು.

ಅಪೂರ್ಣ ಪ್ರಸ್ತಾವನೆಗಳು ಮತ್ತು ಅರ್ಹತೆಯ ಮಾನದಂಡಗಳಿಗೆ ಒಳಪಡದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

**ಆಯ್ಕೆ ಪ್ರಕ್ರಿಯೆ:**

ಬಾಹ್ಯ ತಜ್ಞರ ಸಮಿತಿ ಮೊದಲ ಸುತ್ತಿನಲ್ಲಿ ಆಯ್ಕೆಯಾದ ಪ್ರಸ್ತಾವನೆಗಳ ಪರಿಶೀಲನೆ ನಡೆಸುತ್ತದೆ. ಈ ಸಮಿತಿಯ ಮುಂದೆ ಅರ್ಜಿದಾರರು ತಮ್ಮ ಪರಿಕಲ್ಪನೆಯನ್ನು ಪ್ರಸ್ತುತ ಪಡಿಸಬೇಕಾಗಬಹುದು. ಯೋಜನೆಗಳ ಆಯ್ಕೆಯಲ್ಲಿ ಐಎಫ್ಎಯ ತೀರ್ಮಾನ ಅಂತಿಮವಾಗಿರುತ್ತದೆ.

ಅಪೂರ್ಣ ಮತ್ತು ಅರ್ಹತೆಯನ್ನು ಪೂರೈಸದ ಪ್ರಸ್ತಾವನೆಗಳನ್ನು ಪರಿಗಣಿಸಲಾಗುವುದಿಲ್ಲ.

ಆಯ್ಕೆಯಾದ ಎಲ್ಲ ಯೋಜನೆಗಳನ್ನೂ ಐ ಎಫ್ ಎ ಅನುಷ್ಠಾನಗೊಳಿಸುತ್ತದೆ.

**ಮುಖ್ಯ ದಿನಾಂಕಗಳು:**

- ಯೋಜನೆಯ ಕುರಿತು ಚರ್ಚೆ/ ಪ್ರಶ್ನೆಗಳನ್ನು ಕಳುಹಿಸಲು ಕೊನೆಯ ದಿನಾಂಕ: ಜುಲೈ 11, 2026
- ಅಂತಿಮ ಪ್ರಸ್ತಾವನೆಯನ್ನು ಕಳುಹಿಸಲು ಕೊನೆಯ ದಿನಾಂಕ: ಆಗಸ್ಟ್ 10, 2026
- ಆಯ್ಕೆಗೊಂಡ ಯೋಜನೆಗಳ ಘೋಷಣೆ: ನವೆಂಬರ್ 2026
- ಯೋಜನೆಯ  ಪ್ರಾರಂಭ: ಜನವರಿ 2027 (ಬದಲಾವಣೆ ಆಗಬಹುದು)

**ವಿವಿಧ ಭಾಷಾ ಸಂದರ್ಭಗಳಲ್ಲಿನ ಸಂವಾದಕ್ಕೆ ಸಹಕಾರಿಯಾಗುವ ನಿಟ್ಟಿನಲ್ಲಿ, ಐಎಫ್ಎ ಆಂಗ್ಲಭಾಷೆಯನ್ನು ಒಳಗೊಂಡಂತೆ ಎಲ್ಲ ಭಾರತೀಯ ಭಾಷೆಗಳಲ್ಲಿ ಪ್ರಸ್ತಾವನೆಗಳನ್ನು ಪ್ರೋತ್ಸಾಹಿಸುತ್ತದೆ.**

**ಮಕ್ಕಳನ್ನು ಒಳಗೊಂಡಂತೆ ಎಲ್ಲರಿಗೂ ಸುರಕ್ಷಿತ ಮತ್ತು ಗೌರವಯುತ ವಾತಾವರಣವನ್ನು ನಿರ್ಮಿಸಲು ಐಎಫ್ಎ ಬದ್ಧವಾಗಿದೆ. ಎಲ್ಲ ಅರ್ಜಿದಾರರೂ ಇದಕ್ಕೆ ಬದ್ಧರಾಗಿರಬೇಕು. ಹಾಗೂ ಸದಾಕಾಲ ಇದಕ್ಕೆ ಅನುಗುಣವಾಗಿ ನಡೆದುಕೊಳ್ಳಬೇಕು.**